# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

(ಮೇರಿ ಲೂಯಿಸ್ ಬರ್ಕ್ ಅವರ 'Swami Vivekananda in the West - New Discoveries' ಗ್ರಂಥಾಧಾರಿತ)

**ಸ್ವಾಮಿ ವೀರೇಶಾನಂದ**

## ಭಾಗ ೩

### ಸಲೇಮ್ ಮತ್ತು ಸರಗೋಟಾ ಪಟ್ಟಣಗಳಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದರು ಆಗಸ್ಟ್ ೧೮೯೩ ರಲ್ಲಿ ಶ್ರೀಮತಿ ಕೇಟ್ ಟ್ಯಾನಟ್ ವುಡ್ಸ್ ಎಂಬ ಮಹಿಳೆಯ ಆಹ್ವಾನದ ಮೇರೆಗೆ ಸಲೇಮ್ ಪಟ್ಟಣಕ್ಕೆ ಆಗಮಿಸಿದರು. ೧೬೬, ನಾರ್ತ್ ಸ್ಟ್ರೀಟ್, ಸಲೇಮ್‌ನಲ್ಲಿ ಆಕೆಯ ಮನೆಯಿತ್ತು. ಅಲ್ಲಿ ಅವರು ಒಂದು ವಾರದ ಕಾಲ ನೆಲೆಸಿದ್ದರು. ಅಲ್ಲಿ ಅವರು ಕೆಲವು ಪ್ರವಚನಗಳನ್ನು ಮಾಡಿದರು. ಕೆಲವರು ಕ್ರೈಸ್ತಪಾದ್ರಿಗಳು ಅವರನ್ನು ಕಟುವಾಗಿ ಟೀಕಿಸಿದರು. ಇನ್ನು ಕೆಲವರು ಅವರನ್ನು ಬಹುವಾಗಿ ಮೆಚ್ಚಿಕೊಂಡರು.

ಶ್ರೀಮತಿ ಕೇಟ್ ಟ್ಯಾನಟ್ ವಿಧವೆಯಾಗಿದ್ದಳು. ಆಗ ಅವಳಿಗೆ ೫೮ ವರ್ಷ. ಆಕೆ ಒಬ್ಬ ಬರಹಗಾರಳು ಮತ್ತು ಪ್ರವಚನಕಾರಳಾಗಿದ್ದಳು. ಅವಳ ಮಗ ಪ್ರಿನ್ಸ್ ಆಗ ವೈದ್ಯಕೀಯ ವಿದ್ಯಾರ್ಥಿಯಾಗಿದ್ದನು. ತಮ್ಮ ಭೇಟಿಯ ಕಡೆಯಲ್ಲಿ ಸ್ವಾಮೀಜಿಯವರು ತಾವು ಉಪಯೋಗಿಸುತ್ತಿದ್ದ ದಂಡ, ಒಂದು ಟ್ರಂಕು, ಕಂಬಳಿ ಮತ್ತಿತರ ಸಾಮಾನುಗಳನ್ನು ಅವರ ಮನೆಯಲ್ಲಿಯೇ ಕೊಡುಗೆಯಾಗಿ ಕೊಟ್ಟುಹೋದರು. ೧೮೫೦ರಲ್ಲಿ ಒಂದು ನಿಯತಕಾಲಿಕೆಯಲ್ಲಿ ಜಾಹೀರಾತು ಪ್ರಕಟವಾಯಿತು. ಅದು ವೇದಾಂತ ಸೊಸೈಟಿಯ ಭಕ್ತರೊಬ್ಬರ ಗಮನಕ್ಕೆ ಬಂದಿತು. ಅದನ್ನು ನೀಡಿದರು ಯಾರೂ ಅಲ್ಲ, ಶ್ರೀಮತಿ ಪ್ರಿನ್ಸ್ ವುಡ್ಸ್; ಪ್ರಿನ್ಸ್ ವುಡ್ಸ್ ಅವರ ಪತ್ನಿ! ಆಕೆಯು ತನ್ನ ಸುಪರ್ದಿಯಲ್ಲಿ ಇದ್ದ ಸ್ವಾಮೀಜಿಯವರ ದಂಡ ಮತ್ತು ಟ್ರಂಕುಗಳನ್ನು ಮಾರಾಟಕ್ಕೆ ಇಟ್ಟಿದ್ದಳು. ವೇದಾಂತ ಭಕ್ತರು ಅವರ ಜೊತೆಗೆ ಪತ್ರ ವ್ಯವಹಾರವನ್ನು ನಡೆಸಿದರು. ಆಗಲೇ ಸ್ವಾಮೀಜಿಯವರು ಅವರ ಗಂಡನ ಮನೆಯಲ್ಲಿ ವಾಸ್ತವ್ಯವಾಗಿದ್ದುದು ಬೆಳಕಿಗೆ ಬಂದಿತು.

ಶ್ರೀಮತಿ ಕೇಟ್ ಟ್ಯಾನಟ್ ವುಡ್ಸ್ ಒಂದು ಮಧ್ಯಾಹ್ನ ಮಕ್ಕಳ ಕೂಟವನ್ನು ಏರ್ಪಡಿಸಿದ್ದಳು. ಅವಳಿಗೆ ಮಕ್ಕಳೆಂದರೆ ತುಂಬ ಇಷ್ಟ. ಕೆಲವು ಮಕ್ಕಳ ಪುಸ್ತಕಗಳನ್ನೂ ಅವಳು ಬರೆದಿದ್ದಳು. ಮಕ್ಕಳ ಕೂಟದಲ್ಲಿ ಸ್ವಾಮಿ ವಿವೇಕಾನಂದರೇ ಮುಖ್ಯ ಅತಿಥಿಯಾಗಿದ್ದರು. ಎರಡು ವರ್ಷಗಳ ನಂತರ ಸ್ವಾಮೀಜಿ ಭೇಟಿಯಾದ ಪ್ರಖ್ಯಾತ ಪತ್ರಕರ್ತೆ ಮತ್ತು ಕವಯಿತ್ರಿ ಎಲ್ಲಾ ವೀಲರ್ ವಿಲ್‌ಕಾಕ್ಸ್ ಶ್ರೀಮತಿ ವುಡ್ಸ್‌ಳ ಸ್ನೇಹಿತೆಯಾಗಿದ್ದಳು. ಮೇ, ೧೮೯೫ ರಂದು ಆಕೆ ತನ್ನ ಸ್ನೇಹಿತೆಗೆ ಹೀಗೆ ಪತ್ರ ಬರೆಯುತ್ತಾಳೆ:

"ನಾನು ಇಂದು ಬೆಳಗ್ಗೆ ಒಂದು ಗಂಟೆಯ ಕಾಲ ವಿವೇಕಾನಂದರ ಭಾಷಣವನ್ನು ಕೇಳುತ್ತಿದ್ದೆನು. ಇಂಥ ಮಹಾತ್ಮನಿಗೆ ಅಲ್ಪಸ್ವಲ್ಪ ಸೇವೆ ಮಾಡುವ ಅವಕಾಶ ದೊರೆತುದುದು ನನ್ನ ಸೌಭಾಗ್ಯವೇ ಸರಿ! ಇವರು ಒಬ್ಬ ಮಹಾತ್ಮರ – ಬುದ್ಧ ಅಥವಾ ಯೇಸುಕ್ರಿಸ್ತರ — ಅವತಾರ ಎಂದು ನಾನು ನಂಬುತ್ತೇನೆ. ಅವರು ಬಹಳ ಸರಳ ವ್ಯಕ್ತಿ. ಬಹಳ ಪ್ರಾಮಾಣಿಕರು, ಪರಿಶುದ್ಧರು, ನಿಸ್ವಾರ್ಥಸ್ವಭಾವದವರು. ಈ ಚಳಿಗಾಲದ ಪೂರ್ತಿ ಅವರ ಭಾಷಣಗಳನ್ನು ಕೇಳಿದ್ದು ನನ್ನ ಜೀವನವು ನನಗೆ ದೊರಕಿಸಿದ ಬಹು ದೊಡ್ಡ ಅವಕಾಶವೆಂದೇ ನಾನು ಭಾವಿಸುತ್ತೇನೆ... ಇಂದು ಪ್ರಾತಃಕಾಲ ಅವರ ಪ್ರವಚನವು ಸ್ಫೂರ್ತಿದಾಯಕವಾಗಿತ್ತು. ಅವರ ಬರಿಯ ಸಾನ್ನಿಧ್ಯವು ಅದಕ್ಕಿಂತಲೂ ದಿವ್ಯವಾಗಿತ್ತು. ಅವರು ದಿವ್ಯಾತ್ಮದಲ್ಲಿ ತಲ್ಲೀನರಾಗುತ್ತಿದ್ದರು. ಇದನ್ನೇ ಅವರಲ್ಲಿ ನಾನು ಎಲ್ಲದಕ್ಕಿಂತಲೂ ಹೆಚ್ಚಾಗಿ ಇಷ್ಟಪಡುತ್ತಿದ್ದುದು."

ಸ್ವಾಮಿ ವಿವೇಕಾನಂದರ ಭಾಷಣಗಳನ್ನು ಸಲೇಮ್ ನಗರದ ವೃತ್ತಪತ್ರಿಕೆಗಳು ವರದಿಮಾಡಿದವು. ಸ್ವಾಮೀಜಿ ಸೋಮವಾರ, ಆಗಸ್ಟ್ ೨೮ರಂದು ಸಲೇಮ್ ನಗರದ Thought and Work Club ನ ಸದಸ್ಯರನ್ನು ಉದ್ದೇಶಿಸಿ ವೆಸ್ಲಿ ಚರ್ಚ್‌ನಲ್ಲಿ ಭಾಷಣ ಮಾಡಿದರು. ಅವರು ಹಿಂದೂಧರ್ಮದ ಧರ್ಮಗ್ರಂಥಗಳು ಮತ್ತು ಸಾಮಾಜಿಕ ವ್ಯವಸ್ಥೆಯ ಬಗ್ಗೆ ತಿಳಿಸಿಕೊಟ್ಟರು. ಹಾಗೆಯೇ ಭಾರತದಲ್ಲಿ ನೆಲೆಸಿರುವ ಲಕ್ಷಾಂತರ ಮಂದಿ ಬಡಜನರ ದುರವಸ್ಥೆಯ ಬಗ್ಗೆ ಸಭಿಕರ ಗಮನವನ್ನು ಸೆಳೆದರು. ಈ ಭಾಷಣದಲ್ಲಿ ಸ್ವಾಮೀಜಿ, ಭಾರತದ ಜನತೆಗೆ ಅವಶ್ಯಕವಿರುವುದು ಧರ್ಮವಲ್ಲ, ಅವರು ಬಡತನದಿಂದ ಹೊರಬರಲು ಬೇಕಾದ ತಾಂತ್ರಿಕ ಶಿಕ್ಷಣ ಎಂದು ಪ್ರತಿಪಾದಿಸಿದರು.

ಭಾಷಣದ ಮಧ್ಯದಲ್ಲಿ ಕೆಲವು ಕ್ರೈಸ್ತಪಾದ್ರಿಗಳು ಪ್ರಶ್ನೆಗಳನ್ನು ಹಾಕಿದರು; ಕಟುವಾದ ವಿಮರ್ಶೆಯನ್ನೂ ಮಾಡಿದರು. ಆದರೆ ಅವರಿಗೆಲ್ಲ ಸ್ವಾಮೀಜಿ ಬಹಳ ಸಭ್ಯ ರೀತಿಯಲ್ಲಿಯೇ ಉತ್ತರ ವಿತ್ತರು. ಮುಂದೆಯೂ ಅಮೆರಿಕದಲ್ಲಿ ಸ್ವಾಮೀಜಿ ಈ ರೀತಿಯ ಟೀಕೆಟಿಪ್ಪಣಿಗಳನ್ನು ಕ್ರೈಸ್ತಪಾದ್ರಿಗಳಿಂದ ಕೇಳಬೇಕಾಯಿತು. ಪ್ರಾಯಶಃ ಸ್ವಾಮೀಜಿಗೆ ಅಮೆರಿಕದಲ್ಲಿ ಆದ ಇಂಥ ಮೊಟ್ಟ ಮೊದಲ ಅನುಭವ ಇದು.

ಸ್ವಾಮೀಜಿ ಮುಂದಿನ ವಾರವೆಲ್ಲ ಅಂದರೆ, ಆಗಸ್ಟ್ ೨೯, ೧೮೯೩ರಿಂದ ಸೆಪ್ಟೆಂಬರ್ ೪ರವರೆಗೆ ಶ್ರೀಮತಿ ವುಡ್ಸ್ ಮನೆ

ಯಲ್ಲಿಯೇ ಉಳಿದುಕೊಂಡಿದ್ದರು. ಆಗಸ್ಟ್ ೨೫ರಂದು ಮಂಗಳ ವಾರ, ಮಳೆ ಬೀಳುವ ಮುನ್ನ ಬರುವ ಗಾಳಿಯು ಬೀಸುತ್ತಿತ್ತು. ಅಂದು ಮಧ್ಯಾಹ್ನ ಮನೆಯ ಮುಂದಿನ ಕೈದೋಟದಲ್ಲಿ ಅವರು ಮಕ್ಕಳನ್ನು ಕುರಿತು ಮಾತನಾಡಿದರು. ಮುಂದಿನ ಭಾನುವಾರ, ಅಂದರೆ, ಸೆಪ್ಟೆಂಬರ್ ೩ರಂದು ಸ್ವಾಮೀಜಿ ಈಸ್ಟ್ ಚರ್ಚ್‌ನಲ್ಲಿ ಪ್ರವಚನವನ್ನು ನೀಡಿದರು. ಈ ಚರ್ಚಿನ ಪಾದ್ರಿಯು ಸ್ವಾಮೀಜಿ ಯವರ ಬಗ್ಗೆ ಸಹಾನುಭೂತಿಯುಳ್ಳ ಕೆಲವು ಜನರಲ್ಲಿ ಒಬ್ಬನಾಗಿ ದ್ದನು. ಈ ಭಾಷಣದ ವರದಿ ಕೂಡ ವೃತ್ತಪತ್ರಿಕೆಗಳಲ್ಲಿ ಪ್ರಕಟ ವಾದುವು.

ಈ ಮಧ್ಯೆ ಇನ್ನೊಂದು ಬೆಳವಣಿಗೆಯನ್ನು ನಾವು ಕಾಣು ತ್ತೇವೆ. ಸ್ವಾಮೀಜಿ ಈ ದಿನಗಳಲ್ಲಿ ಪ್ರೊ. ಜಾನ್ ಹೆನ್ರಿ ರೈಟ್ ಅವ ರೊಂದಿಗೆ ಪತ್ರ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಸ್ವಾಮೀಜಿ ಯವರಿಗೆ ಶಿಕಾಗೋದ ವಿಶ್ವಧರ್ಮ ಸಮ್ಮೇಳನದಲ್ಲಿ ಪ್ರತಿನಿಧಿ ಯಾಗುವ ಅವಕಾಶವನ್ನು ಕಲ್ಪಿಸಿಕೊಡುವುದಕ್ಕೆ ಪ್ರೊಫೆಸರ್ ಸಂಬಂಧಪಟ್ಟವರೊಡನೆ ಪತ್ರವ್ಯವಹಾರವನ್ನು ಇಟ್ಟುಕೊಂಡಿ ದ್ದರು. ಸ್ವಾಮೀಜಿ ಆಗಸ್ಟ್ ೩೦ರಂದು ಪ್ರೊಫೆಸರ್ ಅವರಿಗೆ ಕಾಗದವನ್ನು ಬರೆದರು. ಅಲ್ಲಿಯವರಿಗೂ ಅವರಿಗೆ ಶಿಕಾಗೋ ನಗರದಿಂದ ಯಾವುದೇ ಅನುಮತಿಯ ಸಂಕೇತವೂ ಬಂದಿರ ಲಿಲ್ಲ. ಆದರೆ ಅವರು ಸರಗೋಟಾದಿಂದ ಸೆಪ್ಟೆಂಬರ್ ೨, ೧೮೯೩ ರಂದು ಪತ್ರ ಬರೆಯುವಾಗ, ಅವರಿಗೆ ಅಧಿಕೃತ ಅನುಮತಿ ಬಂದಿತ್ತೆಂದು ಕಾಣುತ್ತದೆ. ಅದಕ್ಕೆ ಅವರು ಪ್ರೊಫೆಸರ್ ರೈಟ್ ಅವರಿಗೆ ಹೀಗೆ ಪತ್ರ ಬರೆಯು ತ್ತಾರೆ:

ಶನಿವಾರ, ಸಲೇಮ್ (ಸೆಪ್ಟೆಂಬರ್ ೨, ೧೮೯೩)

''ಪ್ರಿಯ ಅಧ್ಯಾಪಕ್‌ಜಿ,

ನೀವು ಪರಿಚಯ ಪತ್ರವನ್ನು ನನಗೆ ಕಳುಹಿಸಿದ್ದಕ್ಕಾಗಿ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಶಿಕಾಗೋ ನಗ ರದ ಮಿಸ್ಟರ್ ಥೇಲ್ಸ್ ಅವರು ನನಗೆ ಪತ್ರವನ್ನು ಬರೆದು, ಕೆಲವು ಪ್ರತಿನಿಧಿಗಳ ಹೆಸರುಗಳನ್ನು ಮತ್ತು ವಿಶ್ವಧರ್ಮ ಸಮ್ಮೇಳನಕ್ಕೆ ಸೇರಿದ ಇನ್ನೂ ಕೆಲವು ವಿಷಯಗಳನ್ನು ಸೂಚಿಸಿರುವರು.''

ಈ ಪತ್ರದ ಜೊತೆಗೆ ಸ್ವಾಮೀಜಿ ತಾವು ಬರೆದ ಒಂದು ಪದ್ಯವನ್ನು ಕೂಡ ಕಳುಹಿಸಿದರು. ಇದನ್ನು ಕೂಡ ಅವರು ತಮ್ಮ ಈ ಪತ್ರದ ಕಡೆಯಲ್ಲಿ ಹೀಗೆ ನಮೂದಿಸುತ್ತಾರೆ:

ನಾನು ಕವಿತೆಯನ್ನು ಬರೆಯಲು ಪ್ರಯತ್ನಿಸಿದ ಕೆಲವು ಪಂಕ್ತಿ ಗಳನ್ನು ನಿಮಗೆ ಕಳುಹಿಸುತ್ತಿದ್ದೇನೆ. ನಾನು ನಿಮಗೆ ಕೊಡು ತ್ತಿರುವ ತೊಂದರೆಯನ್ನು ನೀವು ನನ್ನ ಮೇಲಿನ ಪ್ರೀತಿಯಿಂದ ಕ್ಷಮಿಸುತ್ತೀರೆಂದು ಭಾವಿಸುತ್ತೇನೆ.

ಈ ಕವಿತೆಯ ಶೀರ್ಷಿಕೆಯು ಹೀಗಿದೆ: **ಈಶಾನ್ವೇಷಣೆ.** ಈ ಕವಿತೆಯು ಸ್ವಾಮೀಜಿಯವರು ಇಂಗ್ಲಿಷ್ ಭಾಷೆಯಲ್ಲಿ ರಚಿಸಿದ ಮೊಟ್ಟಮೊದಲ ಕವಿತೆ ಎಂದು ಕಾಣುತ್ತದೆ. ಇದನ್ನು ಅವರು ಕ್ಷಣ ದಲ್ಲಿ ಬಂದ ಅದಮ್ಯ ಸ್ಫೂರ್ತಿಯಿಂದ ಬರೆದರು; ಬರೆದರು ಅನ್ನುವುದಕ್ಕಿಂತ ಒಂದು ಲೆಟರ್ ಪ್ಯಾಡಿನಲ್ಲಿ ರಭಸದಿಂದ ಗೀಚಿ ದರು. ಇದಲ್ಲದೆ, ಈ ಕವಿತೆಯು ಸ್ವಾಮೀಜಿಯವರ ಆಂತರಿಕ ತೊಳಲಾಟದ ಅಭಿವ್ಯಕ್ತಿಯ ಸಾಲುಗಳಾಗಿವೆ ಎಂದೇ ಹೇಳ ಬೇಕು. ಬರೆದ ನಂತರ ಸ್ವಾಮೀಜಿ ಅಲ್ಲಲ್ಲಿ ಬರಹವನ್ನು ತಿದ್ದಿ ಪ್ರೊಫೆಸರ್ ರೈಟ್ ಅವರಿಗೆ ಕಳುಹಿಸಿದರು ಎಂದು ಕಾಣುತ್ತದೆ. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯ ಎಂಟನೆಯ ಸಂಪುಟ ದಲ್ಲಿ ಈ ಪದ್ಯದ ಬಗ್ಗೆ ಹೀಗೆ ವಿವರಣೆಯನ್ನು ನೀಡಲಾಗಿದೆ. ಇದರಿಂದ ಇದರ ಮಹತ್ವದ ಅರಿವು ನಮಗೆ ಆಗುತ್ತದೆ:

'ಸುದೀರ್ಘವಾದ ಈ ಕವನವನ್ನು ಇಲ್ಲಿ ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಸತ್ಯಾನ್ವೇಷಣೆಯಲ್ಲಿನ ತಮ್ಮ ತೀವ್ರ ತೊಳಲಾಟವನ್ನೂ, ಶ್ರೀರಾಮಕೃಷ್ಣರನ್ನು ಕಾಣುವುದರೊಂದಿಗೆ ಈ ಅನ್ವೇಷಣೆ ಸಾರ್ಥಕವಾದದ್ದನ್ನೂ ಸ್ವಾಮೀಜಿ ಮೊದಲ ಭಾಗ ದಲ್ಲಿ ನಿರೂಪಿಸಿದ್ದಾರೆ. ಶ್ರೀರಾಮಕೃಷ್ಣರ ಸಂಪರ್ಕದಿಂದಾಗಿ ಸ್ವಾಮೀಜಿಯವರ ಜೀವನಕ್ಕೆ ಒದಗಿದ ದರ್ಶನ ಹಾಗೂ ಅದರ ವಿಸ್ತಾರಗಳ ವರ್ಣನೆ ಎರಡನೆಯ ಭಾಗದಲ್ಲಿದೆ. ಹೀಗಾಗಿ ಈ ಕವನ ಒಂದು ಬಗೆಯ ಆತ್ಮಚರಿತ್ರೆಯ ಮಹತ್ವವನ್ನು ಹೊಂದಿದೆ.'

ಈ ಕವಿತೆಯ ಕೆಲವು ಸಾಲುಗಳು ಹೀಗಿವೆ:

**ಬೆಟ್ಟಗುಡ್ಡಗಳಲ್ಲಿ, ಪರ್ವತದ ತಪ್ಪಲಲಿ**
**ಗುಡಿಮಸೀದಿಗಳಲ್ಲಿ, ಚರ್ಚುಗಳಲಿ,**
**ವೇದಶಾಸ್ತ್ರಗಳಲ್ಲಿ, ಬೈಬಲು ಕುರಾನಿನಲಿ**
**ನಿನ್ನನರಸುತ ನೊಂದೆ ವಿಫಲತೆಯಲಿ**

**ಘೋರತಮ ವಿಪಿನದಲಿ ದಾರಿತಪ್ಪಿದ ಶಿಶುವಿನಂತೆ**
**ನಾನೇಕಾಂಗಿ ಮೊರೆಯುತಿರಲು;**
**ನೀನೆತ್ತ ಹೋಗಿರುವೆ ಎನ್ನ ಪ್ರಭುವೆ? ಎನಲು**
**ಮರುದನಿಯ ಉತ್ತರವು ಬರಿಯ ಬಯಲು**

**ಹಗಲು ಇರುಳೂ ಮತ್ತೆ ವರುಷಗಳೆ ಉರುಳಿದುವು**
**ತಲೆಯು ಸಿಡಿವಂತಿತ್ತು ತಾಪದಲ್ಲಿ;**
**ಹಗಲು ಇರುಳಿನ ಮನೆಯ ಹೊಕ್ಕುದರ ಪರಿವಿಲ್ಲ,**
**ಎದೆಯು ಚೂರಾಗಿತ್ತು ನೋವಿನಲ್ಲಿ.**

ಸೋಮವಾರ, ಸೆಪ್ಟೆಂಬರ್ ೪, ೧೮೯೩ರ ರಾತ್ರಿ ಸ್ವಾಮೀಜಿ ಸರಗೋಟಾ ಎನ್ನುವ ಪಟ್ಟಣಕ್ಕೆ ಹೊರಟರು. ಅಲ್ಲಿ ಅವರು ಅವರು Social Science Association ಎಂಬ ಸಂಘಟ ನೆಯು ಆಯೋಜಿಸಿದ್ದ ಸಮ್ಮೇಳನದಲ್ಲಿ ಭಾಷಣ ಮಾಡಿದರು. ಸಮ್ಮೇಳನದ ಸಭೆಗಳು ಸರಗೋಟಾದ ಟೌನ್‌ಹಾಲಿನ ನ್ಯಾಯಾ ಲಯದ ಕೊಠಡಿಗಳಲ್ಲಿ ನಡೆದವು. ಈ ಸಭೆಗಳ ವಿಷಯಗಳು ಬಹುಮಟ್ಟಿಗೆ ಲೌಕಿಕ ವಿಷಯಗಳೇ ಆಗಿದ್ದವು. ಆದರೆ ಸ್ವಾಮಿ ವಿವೇಕಾನಂದರು ಎಲ್ಲ ವಿಷಯಗಳಲ್ಲಿಯೂ ಪರಿಣತರು. ಈ ಸಮ್ಮೇಳನದ ಸಂಪ್ರದಾಯಕ್ಕೆ ಅನುಸಾರವಾಗಿ ಅವರು ಭಾರತ

ದಲ್ಲಿ ಮುಸ್ಲಿಮರ ಆಡಳಿತ (ಸೆಪ್ಟೆಂಬರ್ ೫, ೧೮೯೩ರ ಸಂಜೆಯಂದು), ಭಾರತದಲ್ಲಿ ಬೆಳ್ಳಿಯ ಉಪಯೋಗ (ಸೆಪ್ಟೆಂಬರ್ ೬, ೧೮೯೩ರ ಬೆಳಗ್ಗೆಯಂದು) ಈ ವಿಷಯಗಳ ಬಗ್ಗೆ ಮಾತನಾಡಿದರು. ಇದಲ್ಲದೆ ಅವರು ಸೆಪ್ಟೆಂಬರ್ ೬ರ ಸಂಜೆಯೂ ಕೂಡ ಭಾಷಣ ಮಾಡಿದರು. ಆದರೆ ಆ ಭಾಷಣದ ವಿಷಯ ನಮಗೆ ಲಭ್ಯವಿಲ್ಲ. ಸ್ವಾಮೀಜಿಯವರ ಈ ಭಾಷಣದ ವರದಿಗಳನ್ನು ಸ್ಥಳೀಯ ವೃತ್ತಪತ್ರಿಕೆಗಳು ಬಗೆಬಗೆಯಲ್ಲಿ ವರದಿ ಮಾಡಿರುವುದನ್ನು ನೋಡುತ್ತೇವೆ.

ಸ್ವಾಮೀಜಿ ಸರಗೋಟಾದಿಂದ ಶಿಕಾಗೋ ನಗರಕ್ಕೆ ರೈಲಿನಲ್ಲಿ ಪ್ರಯಾಣ ಮಾಡಿ, ಶುಕ್ರವಾರ ಸೆಪ್ಟೆಂಬರ್ ೮, ಅಥವಾ ಶನಿವಾರ, ಸೆಪ್ಟೆಂಬರ್ ೯, ೧೮೯೩ರ ಸಂಜೆಯಂದು ಅಲ್ಲಿನ ಸುಂದರವಾದ ಕೆಂಪು ಇಟ್ಟಿಗೆಗಳ ಕಟ್ಟಡವಿರುವ ಡಿಯರ್ ಬಾರ್ನ್ ರಸ್ತೆಯ ರೈಲುನಿಲ್ದಾಣವನ್ನು ತಲುಪಿದರು. ಇಲ್ಲಿಂದಲೇ ಅವರು ಮೂರು ವಾರಗಳ ಹಿಂದೆ ಶಿಕಾಗೋ ನಗರದಿಂದ ತೆರಳಿದ್ದರು.

ಹೀಗೆ ಸ್ವಾಮಿ ವಿವೇಕಾನಂದರು ತಾವು ಶಿಕಾಗೋದಿಂದ ಹೊರಬಂದ ಮೂರು ವಾರಗಳ ಕಾಲ ೧೧ ಪ್ರವಚನಗಳನ್ನು ಮಾಡಿದರು. ಇದಲ್ಲದೆ ಹಲವಾರು ಮನೆಗಳಲ್ಲಿ ಗುಂಪುಗಳ ಜೊತೆಗೆ ಮಾತನಾಡಿದರು. ಮಕ್ಕಳ ಕೂಟಗಳಲ್ಲಿಯೂ ಭಾಷಣ ಮಾಡಿದರು. ಒಟ್ಟಾರೆ ಅವರು ಅಮೆರಿಕೆಯ ಸಮಾಜದ ಹಲವಾರು ಪಂಗಡಗಳ ಜನರ ಸಂಪರ್ಕಕ್ಕೆ ಬಂದರು. ಕೆಲವರು ಕ್ರೈಸ್ತಪಾದ್ರಿಗಳನ್ನೂ ಭೇಟಿಮಾಡಿದರು. ಅವರಲ್ಲಿ ಕೆಲವರು ಇವರನ್ನು ಬಹುವಾಗಿ ಮೆಚ್ಚಿಕೊಂಡರು. ಇನ್ನು ಕೆಲವರು ಟೀಕೆಯ ಮಾತುಗಳನ್ನು ಆಡಿದರು. ಇದಲ್ಲದೆ, ಅನೇಕ ಸಭ್ಯ ಮಹಿಳೆಯರ ಹಾಗೂ ಮಹನೀಯರ ತುಂಬು ಸ್ನೇಹವನ್ನು ಸ್ವಾಮೀಜಿ ಸಂಪಾದಿಸಿಕೊಂಡರು. ಅವರಲ್ಲಿ ಕೆಲವರು ಚಿಂತನಶೀಲ ವಿದ್ವಾಂಸರಿದ್ದರು, ಮತ್ತೆ ಕೆಲವರು ಶಿಕ್ಷಣತಜ್ಞರಿದ್ದರು; ಇನ್ನೂ ಕೆಲವರು ಬರಹಗಾರರು ಮತ್ತು ಭಾಷಣಕಾರರೂ ಇದ್ದರು. ಶಿಕಾಗೋ ನಗರದ ಸರ್ವಧರ್ಮ ಸಮ್ಮೇಳನದಲ್ಲಿ ಭಾಷಣಮಾಡುವುದಕ್ಕೆ ಸ್ವಾಮೀಜಿಯವರಿಗೆ ಇವೆಲ್ಲ ಪೂರ್ವಸಿದ್ಧತೆಗಳಾಗಿದ್ದವು ಎನ್ನಬಹುದು.

ಅಂದಿನ ದಿನಗಳಲ್ಲಿ ಸ್ವಾಮೀಜಿ ಭಾರತದ ಪುನರುದ್ಧಾರಕ್ಕಾಗಿ ಅಮೆರಿಕದ ಜನತೆಯಿಂದ ಸಹಾಯವನ್ನು ಯಾಚಿಸುವ ಘನ ಕಾರ್ಯದಲ್ಲಿ ಆಸಕ್ತರಾಗಿದ್ದರು. ಆದರೆ ತಮಗೆ ಸಿಕ್ಕ ಅತ್ಯಲ್ಪ ಸಹಾಯದ ಹೊರತಾಗಿಯೂ, ತಮ್ಮ ತನು ಮನಗಳನ್ನು ಅಮೆರಿಕೆಯಲ್ಲಿ ಒಂದು ಆಧ್ಯಾತ್ಮಿಕ ಜಾಗೃತಿಯನ್ನು ಉಂಟು ಮಾಡುವುದಕ್ಕಾಗಿ ಸವೆಸಿದರು; ಅದಕ್ಕಾಗಿ ಅಹರ್ನಿಶಿ ದುಡಿಯುತ್ತಿದ್ದರು. ***(ಮುಂದಿನ ಸಂಚಿಕೆಗೆ)***

## ಶ್ರೀಮಾತೆಯವರ ಉಪದೇಶಗಳು



❁ **ಶಿಷ್ಯ :** (ಆಲದ ಬೀಜವನ್ನು ತಂದು) ಅಮ್ಮಾ, ನೋಡಿದಿರಾ? ಹರಿವೆ ಸೊಪ್ಪಿನ ಕಾಳಿಗಿಂತಲೂ ಸಣ್ಣ ಬೀಜ ಇದರದು. ಇದರಿಂದ ಎಷ್ಟು ದೊಡ್ಡ ಮರವಾಗುತ್ತದೆ! ಆಶ್ಚರ್ಯ !

**ಶ್ರೀಮಾತೆ :** ಅಲ್ಲವೇ ಮತ್ತೆ ? ನೋಡು, ಭಗವಂತನ ನಾಮದ ಬೀಜ ಎಷ್ಟು ಸಣ್ಣದು ? ಆದರಿಂದಲೇ ಕಾಲಕ್ರಮದಲ್ಲಿ ಭಾವ, ಭಕ್ತಿ, ಪ್ರೇಮ ಇತ್ಯಾದಿಗಳೆಲ್ಲ ಉಂಟಾಗುವುವು.

❁ ಏನೇನು ತಿನ್ನುತ್ತೀಯೋ ಅದನ್ನು ಭಗವಂತನಿಗೆ ಅರ್ಪಿಸಿ ತಿನ್ನು. ಪ್ರಸಾದವಲ್ಲದ ಅನ್ನ ಉಣ್ಣಬಾರದು. ಎಂಥ ಆಹಾರ ಉಣ್ಣುತ್ತೀಯೋ ಅಂಥ ರಕ್ತ ಉಂಟಾಗುವುದು. ಶುದ್ಧ ಆಹಾರ ಉಂಡರೆ ಶುದ್ಧ ರಕ್ತವುಂಟಾಗುವುದು, ಶುದ್ಧ ಮನಸ್ಸು ಉಂಟಾಗುವುದು, ಶಕ್ತಿ ದೊರಕುವುದು. ಶುದ್ಧ ಮನಸ್ಸಿನಿಂದ ಶುದ್ಧವಾದ ಭಕ್ತಿಯುಂಟಾಗುವುದು, ಪ್ರೇಮ ಉಂಟಾಗುವುದು.

❁ **ಶಿಷ್ಯ :** ಅಮ್ಮಾ, ಶ್ರೀರಾಮಕೃಷ್ಣರು ತ್ಯಾಗವನ್ನು ತುಂಬಾ ಇಷ್ಟಪಡುತ್ತಿದ್ದರು. ನಮಗೆ ತ್ಯಾಗವೆಲ್ಲಿದೆ ?

**ಶ್ರೀಮಾತೆ :** ಕ್ರಮೇಣ ಎಲ್ಲ ದೊರಕುವುದು. ಈ ಜನ್ಮದಲ್ಲಿ ಕೆಲವೊಂದು ಲಭಿಸಿದೆ, ಮುಂದಿನ ಜನ್ಮದಲ್ಲಿ ಇನ್ನೂ ಕೆಲವು ದೊರಕುವುದು. ದೇಹ ಮಾತ್ರ ಬದಲಾಗು ವುದು, ಆತ್ಮ ಒಂದೇ ಆಗಿ ಉಳಿಯುವುದು.

❁ **ಶಿಷ್ಯ :** ಅಮ್ಮಾ, ಧ್ಯಾನ ಇತ್ಯಾದಿ ಯಾವುದೂ ಸರಿಯಾಗಿ ನಡೆಯುತ್ತಿಲ್ಲ.

**ಶ್ರೀಮಾತೆ :** ಅದರಿಂದೇನೂ ತೊಂದರೆಯಿಲ್ಲ. ಶ್ರೀರಾಮಕೃಷ್ಣರ ಭಾವಚಿತ್ರವನ್ನು ನೋಡಿದರೂ ಸಾಕು.

**ಶಿಷ್ಯ :** ಅಮ್ಮಾ, ಯಥಾವಿಧಿ ಮೂರು ಸಲ ಜಪ ಮಾಡುವುದೂ ಕೂಡ ಯಾವಾಗಲೂ ಸಾಧ್ಯವಾಗುತ್ತಿಲ್ಲ.

**ಶ್ರೀಮಾತೆ :** ಅದು ಸಾಧ್ಯವಾಗದಿದ್ದರೆ ಶ್ರೀರಾಮಕೃಷ್ಣರ ಸ್ಮರಣೆ-ಮನನ ಮಾಡು. ಯಾವಾಗ ಸಾಧ್ಯವೋ ಆಗ ಅವರ ಜಪ ಮಾಡು. ಕಡೇ ಪಕ್ಷ ನೀನು ಅವರಿಗೆ ಪ್ರಣಾಮ ಮಾಡಬಲ್ಲೆ ತಾನೆ ?

**'ಶ್ರೀಶಾರದಾದೇವಿ ವಚನವೇದ'** ದಿಂದ, ಪು.೨೪೧-೪೩